1584/6

(26)

Ukk
01/4/24

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು, ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ:-

ವಿಷಯ:_"ಬೆಳಗಾವಿಯಲ್ಲಿ ಐ.ಟಿ. ಮತ್ತು ಬಿ.ಟಿ. ಪಾರ್ಕ್ ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ಪ್ರಸ್ತುತ ಇರುವ ಐ.ಟಿ. ಮತ್ತು ಬಿ.ಟಿ. ಪಾರ್ಕ್‌ಗಳಲ್ಲಿ ಎಷ್ಟು ಉದ್ಯಮಗಳು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿವೆ. ಈ ಉದ್ಯಮಗಳು ಯಾವ ವರ್ಷದಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆದು, ಯಾವಾಗ ಉದ್ಯಮಗಳನ್ನು ಕಾರ್ಯಾರಂಭ ಮಾಡಿವೆ ಮತ್ತು ಉಳಿದಂತೆ ಇನ್ನೆಷ್ಟು ಉದ್ಯಮಗಳು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಬೇಕಿದೆ. ಬೆಳಗಾವಿಯಲ್ಲಿ ಐ.ಟಿ. ಮತ್ತು ಬಿ.ಟಿ. ಕ್ಷೇತ್ರಕ್ಕೆ ಒತ್ತು ನೀಡಿ ಉತ್ತರ ಕರ್ನಾಟಕ ಭಾಗದ ಸಾವಿರಾರು ನುರಿತ ಯುವಕ ಮತ್ತು ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರದ ರೂಪರೇಷಗಳ ಕುರಿತು"

* * * *

**ಉತ್ತರ:**

**ಐಟಿ ಪ್ಲಗ್-ಅಂಡ್-ಪ್ಲೇ ಮೂಲಸೌಕರ್ಯ ಸ್ಥಾಪನೆ**

ಬೆಳಗಾವಿಯಲ್ಲಿ ಸ್ಥಾಪಿತವಾಗುವ ಐಟಿ ಮತ್ತು ಬಿಟಿ ಕಂಪನಿಗಳಿಗೆ ಹಾಗೂ ಸ್ಟಾರ್ಟ್‌ಅಪ್‌ಗಳ ತಕ್ಷಣ ಬೇಡಿಕೆಯನ್ನು ಪೂರೈಸುವುದಿಕ್ಕಾಗಿ ಕಲಾ ಮಂದಿರದಂತಹ ಐಟಿ ಪ್ಲಗ್-ಅಂಡ್-ಪ್ಲೇ ಕೇಂದ್ರವನ್ನು ಸ್ಥಾಪಿಸಲು ಸೂಕ್ತವಾದ ಮೂಲ ಸೌಕರ್ಯವಿರುವ ಸ್ಥಳವನ್ನು ಗುರುತಿಸಲು ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

**ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು:**

ಬೆಳಗಾವಿಯಲ್ಲಿ ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ಈ ಕೆಳಕಂಡ ಸಂಸ್ಥೆಗಳಲ್ಲಿ ಮೂರು ಟೆಕ್ನಾಲಜಿ ಬಿಸಿನೆಸ್ ಇನ್ಕ್ಯುಬೇಟರ್‌ಗಳು (TBI) ಗಳನ್ನು ಸ್ಥಾಪಿಸಲಾಗಿದೆ:-

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಜ್ಞಾನ ಸಂಗಮ.
2. ಕೆಎಲ್‌ಇ ಟೆಕ್ನಾಲಾಜಿಕಲ್ ಯೂನಿವರ್ಸಿಟಿ
3. ಮರಾಠ ಮಂಡಲ್ಸ್ ಇಂಜನಿಯರಿಂಗ್ ಕಾಲೇಜು

ಬೆಳಗಾವಿಯ ಈ ಕೆಳಕಂಡ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ವ್ಯವಹಾರ ಮಾದರಿಯನ್ನು ರೂಪಿಸಲು, ಉದ್ಯಮಿಗಳಂತೆ ಯೋಚಿಸುವಂತೆ ಪ್ರೋತ್ಸಾಹಿಸಲು ಮಾರ್ಗದರ್ಶಕರನ್ನು ನಿಯೋಜಿಸುವ ಮೂಲಕ ಬೆಂಬಲ ಒದಗಿಸಲು ನ್ಯೂ ಏಜ್ ಇನ್ನೋವೇಶನ್ ನೆಟ್‌ವರ್ಕ್ (NAIN) ಕೇಂದ್ರಗಳನ್ನು ಸ್ಥಾಪಿಸಲಾಗಿದೆ:-

- ಕೆಎಲ್‌ಇ ಫಾರ್ಮಸಿ ಕಾಲೇಜು
- ಎಸ್ ಜಿ ಬಾಳೆಕುಂದ್ರಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ

**ವೇಗವರ್ಧಕ ಜಾಲಗಳು ಮತ್ತು ಸೀಡ್ ಫಂಡ್ ಬೆಂಬಲ:**

ಕರ್ನಾಟಕ ಆಕ್ಸಿಲರೇಷನ್ ನೆಟ್‌ವರ್ಕ್ ಅಡಿಯಲ್ಲಿ, ಬೆಳಗಾವಿಯ HDB ಕ್ಲಸ್ಟರ್‌ನ ಸ್ಟಾರ್ಟ್‌ಅಪ್‌ಗಳಿಗೆ ರಚನಾತ್ಮಕ ಮಾರ್ಗದರ್ಶನ, ಮಾರುಕಟ್ಟೆ ಪ್ರವೇಶ ಹಾಗೂ ಹೂಡಿಕೆದಾರರ ಸಂಪರ್ಕ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ.

**ಟೆಕ್ಸಿಲರೇಷನ್ -2025:**

ಬೆಳಗಾವಿಯಲ್ಲಿ ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದ ತಂತ್ರಜ್ಞಾನ ಶೃಂಗಸಭೆ**ಟೆಕ್ಸಿಲರೇಷನ್ 2025** ಅನ್ನು ಆಗಸ್ಟ್‌ನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇರುತ್ತವೆ:-

- 700ಕ್ಕೂ ಹೆಚ್ಚು ಪ್ರತಿನಿಧಿಗಳ ಉಪಸ್ಥಿತಿ
- 2 ವಿದೇಶಿ ನಿಯೋಗಗಳಿಂದ ಭಾಗವಹಿಸುವಿಕೆ
- ಪ್ರಮುಖ ರಾಷ್ಟ್ರೀಯ ಹಾಗೂ ಜಾಗತಿಕ ಕಂಪನಿಗಳ ಪ್ರದರ್ಶನ

- ಹುಬ್ಬಳ್ಳಿ–ಧಾರವಾಡ – ಬೆಳಗಾವಿ ಕ್ಲಸ್ಟರ್‌ನಲ್ಲಿ ನಾವೀನ್ಯತೆ, ನವೋದ್ಯಮ ಮತ್ತು ಉದ್ಯಮಶೀಲ ಪರಿಸರ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಅತ್ಯುತ್ತಮ ಕೊಡುಗೆ ನೀಡಿದ್ದಕ್ಕಾಗಿ ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿರುವ ಕೃಷಿಕ್ ಅಗ್ರಿ ಬ್ಯುಸಿನೆಸ್ ಇನ್ಕ್ಯುಬೇಟರ್ ಅನ್ನು ಗೌರವಿಸಲಾಯಿತು.

ಈ ಕಾರ್ಯಕ್ರಮವು ಬೆಳಗಾವಿಯನ್ನು ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರವಾಗಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಲು ನೆರವಾಗಿದೆ.

**LEAP ಮತ್ತು Elevate ಸಾಧನೆಗಳು:**

- ಹುಬ್ಬಳ್ಳಿ –ಧಾರವಾಡ –ಬೆಳಗಾವಿ ಕ್ಲಸ್ಟರ್‌ಗೆ 52 ಸ್ಟಾರ್ಟ್‌ಅಪ್ ಅರ್ಜಿಗಳು ಬಂದಿದ್ದು ಇದು ಇತಿಹಾಸದಲ್ಲೇ ಗರಿಷ್ಠವಾಗಿದೆ.
- ಶ್ರೇಷ್ಠ 10 ಸ್ಟಾರ್ಟ್‌ಅಪ್‌ಗಳನ್ನು ಟೆಕ್ಸಿಲರೇಷನ್ ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು.
- ಈ ಸ್ಟಾರ್ಟ್‌ಅಪ್‌ಗಳಿಗೆ BTS 2025 ನಲ್ಲಿ ಉಚಿತ ಬೂತ್ ಗಳನ್ನು ನೀಡಲಾಯಿತು. ಕರ್ನಾಟಕದ ಇತಿಹಾಸದಲ್ಲಿ ಪ್ರಾದೇಶಿಕ ಸ್ಟಾರ್ಟ್‌ಅಪ್‌ಗಳನ್ನು ಇದೇ ಮೊದಲ ಬಾರಿಗೆ ಬೆಂಬಲಿಸಲಾಗಿದೆ.

ELEVATE 2025 ಅಡಿಯಲ್ಲಿ, ಬೆಳಗಾವಿ ಹಾಗೂ ಕಿತ್ತೂರು ಕರ್ನಾಟಕ ಪ್ರದೇಶವು ಹೆಚ್ಚಿನ ಭಾಗವಹಿಸುವಿಕೆಯನ್ನು ಹಾಗೂ ಅನೇಕ ವಿಜೇತರನ್ನು ಒಳಗೊಂಡಿದ್ದು, ಇದು ಜಿಲ್ಲೆಯ ಅಭಿವೃದ್ಧಿ ಹೊಂದುತ್ತಿರುವ ಉದ್ಯಮಶೀಲ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ.

**ಸಮಗ್ರ ಅಭಿವೃದ್ಧಿ ಹಾಗೂ ಭವಿಷ್ಯದ ತಂತ್ರಜ್ಞಾನ ಕಾರ್ಯಕ್ರಮ:**

ESDM, ಕೃಷಿ-ಟೆಕ್, ಇಂಡಸ್ಟ್ರಿ 4.0, ಏರೋಸ್ಪೇಸ್ ಕ್ಷೇತ್ರಗಳಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್‌ಗಳ ಸ್ಥಾಪನೆ, TBI ಗಳ ಸ್ಥಾಪನೆ, ಕಲಾಮಂದಿರದಲ್ಲಿ ಬರಲಿರುವ PPP ಕೋವರ್ಕಿಂಗ್ ಹಬ್ ಮತ್ತು ನಿರಂತರ ಕೈಗಾರಿಕಾ ಸಂವಾದ ಇವೆಲ್ಲವೂ "ಬಿಯಾಂಡ್ ಬೆಂಗಳೂರು" ಕಾರ್ಯಕ್ರಮದಡಿ ಬೆಳಗಾವಿಯನ್ನು ಪ್ರಮುಖ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರವನ್ನಾಗಿ ರೂಪಿಸಲು ಕ್ರಮ ವಹಿಸಲಾಗುತ್ತಿದೆ.

KDEM ಸಂಸ್ಥೆಯು ಹುಬ್ಬಳ್ಳಿ–ಧಾರವಾಡ–ಬೆಳಗಾವಿ ವಿಷನ್ ಡಾಕ್ಯುಮೆಂಟ್ ಅನ್ನು ಸಲ್ಲಿಸಿದ್ದು, ಇದು ಉದ್ಯಮ, ಶೈಕ್ಷಣಿಕ ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರಿಂದ ಸಲಹೆಯನ್ನು ಒಳಗೊಂಡಿರುತ್ತದೆ.

ಮುಂದುವರೆದು, ಬೆಳಗಾವಿಯಲ್ಲಿ ಐ.ಟಿ. ಮತ್ತು ಬಿ.ಟಿ. ಕ್ಷೇತ್ರಕ್ಕೆ ಒತ್ತು ನೀಡಿ ಉತ್ತರ ಕರ್ನಾಟಕ ಭಾಗವನ್ನು ಒಳಗೊಂಡಂತೆ ರಾಜ್ಯದಾದ್ಯಂತ ಇರುವ ಸಾವಿರಾರು ನುರಿತ ಯುವಕ ಮತ್ತು ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಈ ಕೆಳಕಂಡ ರೂಪರೇಷಗಳನ್ನು ಹಮ್ಮಿಕೊಂಡಿದೆ.

- **ನಿಪುಣ ಕರ್ನಾಟಕ** : ಕರ್ನಾಟಕದ ನಿರುದ್ಯೋಗಿಗಳನ್ನು ಐ.ಟಿ ಉದ್ಯಮದಲ್ಲಿ ಅಭಿವೃದ್ಧಿ ಹೊಂದಲು ಅಗತ್ಯವಾದ ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸುವುದು, ಸುಸ್ಥಿರ ಉದ್ಯೋಗ ಖಚಿತಪಡಿಸುವುದು ಮತ್ತು ರಾಜ್ಯದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುವುದಕ್ಕಾಗಿ ಹಾಗೂ ಉದ್ಯಮ-ಸಂಬಂಧಿತ ಕೌಶಲ್ಯ ಅಭಿವೃದ್ಧಿ, ಸಾರ್ವಜನಿಕ-ಖಾಸಗಿ ಸಹಭಾಗಿತ್ವಗಳು, ಹೊಂದಿಕೊಳ್ಳುವ ತರಬೇತಿ ಮಾದರಿಗಳು, ಸಮಗ್ರ ಕಾರ್ಯತಂತ್ರ, ಸುಸ್ಥಿರ ಪರಿಸರ ವ್ಯವಸ್ಥೆಯನ್ನೊಳಗೊಂಡ ಪ್ರಮುಖ ಅಂಶಗಳೊಂದಿಗೆ "ನಿಪುಣ ಕರ್ನಾಟಕ" ಎಂಬ ಉಪಕ್ರಮವನ್ನು ಘೋಷಿಸಿರುತ್ತದೆ.
- **ಐಡಿಯಾ 2 ಪಿಓಸಿ-ಎಲಿವೇಟ್ ಕಾರ್ಯಕ್ರಮ (ಗ್ರಾಂಟ್-ಇನ್-ಏಡ್):** ಕರ್ನಾಟಕದಾದ್ಯಂತ ನವೀನ ನವೋದ್ಯಮಗಳನ್ನು ಗುರುತಿಸಲು ಮತ್ತು ಪೋಷಿಸಲು ಮತ್ತು ಧನಸಹಾಯ ಅಥವಾ ಮಾರ್ಗದರ್ಶನದ ಮೂಲಕ ವಿವಿಧ ಹಂತಗಳಲ್ಲಿ ಅಗತ್ಯವಾದ ಉತ್ತೇಜನವನ್ನು ಒದಗಿಸಲು, ನವೋದ್ಯಮಿಗಳನ್ನು ಪ್ರೋತ್ಸಾಹಿಸಲು ರೂ.50 ಲಕ್ಷಗಳವರೆಗೆ ಒಂದು ಬಾರಿಯ ಅನುದಾನವನ್ನು ನೀಡಲಾಗುತ್ತದೆ.
- **ರಾಜೀವ್ ಗಾಂಧಿ ಉದ್ಯಮಶೀಲತೆ ಕಾರ್ಯಕ್ರಮ (RGEP):** ಹೊಸ ಆಲೋಚನೆಗಳನ್ನು ಉತ್ತೇಜಿಸಿ, ಯುವ ಹಾಗೂ ಪ್ರತಿಭಾವಂತ ಪದವೀಧರರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಮಹತ್ವದ ಉಪಕ್ರಮವಾಗಿದೆ. ಈ ಕಾರ್ಯಕ್ರಮದ ಮೂಲಕ 12 ತಿಂಗಳ ಅವಧಿಗೆ ಮಾಸಿಕ ರೂ.25,000/-ಗಳ ಸ್ಟೈಫಂಡ್/ಜೀವನಾಧಾರ ಅನುದಾನ ನೀಡಲಾಗುತ್ತದೆ. ಇದರಿಂದ ಕಲ್ಪನೆಯ/ಐಡಿಯೇಶನ್ ಹಂತದಲ್ಲಿನ 30 ನಾವೀನ್ಯಕಾರರಿಗೆ ಬೆಂಬಲ ನೀಡಲಾಗುತ್ತದೆ.
- **ಎಲಿವೇಟ್ ಮಹಿಳಾ ಉದ್ಯಮಶೀಲತೆ (WEscalate):** ಈ ಯೋಜನೆಯಡಿ 30 ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸಿ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸಲು ಪ್ರಸಕ್ತ

ಸಾಲಿಗೆ 02 ಇನ್ಕ್ಯುಬೇಟರ್‌ಗಳು/ಆಕ್ಸಿಲರೇಟರ್‌ಗಳನ್ನು ಆಯ್ಕೆ ಮಾಡಲಾಗಿದೆ.

- **ಗ್ರಾಸ್ ರೂಟ್ ಇನ್ನೊವೇಷನ್ ಕಾರ್ಯಕ್ರಮ:** ರೈತರು, ಕುಶಲಕರ್ಮಿಗಳು, ಕಾರ್ಮಿಕರು, ತಂತ್ರಜ್ಞರು ಮತ್ತು ಇತರ ತಳಮಟ್ಟದ ನಾವೀನ್ಯಕಾರರನ್ನು ಗುರುತಿಸಲು, ಉತ್ತೇಜಿಸಲು, ಬೆಂಬಲಿಸಲು ಮತ್ತು ಅವುಗಳನ್ನು ವ್ಯಾಪಕ ಅನ್ವಯಿಕೆಗಳಿಗೆ ಅಪ್‌ಗ್ರೇಡ್ ಮಾಡಲು ಮತ್ತು ಗ್ರಾಮೀಣ ಪ್ರದೇಶದವರಿಗೆ ಆರ್ಥಿಕ ಬೆಂಬಲ ನೀಡಲು ಗ್ರಾಸ್‌ರೂಟ್ ನಾವೀನ್ಯತಾ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಉಪಕ್ರಮದಡಿ ತಮ್ಮ ತಂತ್ರಜ್ಞಾನವನ್ನು ಪರಿಪೂರ್ಣಗೊಳಿಸಲು ಮತ್ತು ಅವರ ನಾವೀನ್ಯತೆಗಳನ್ನು ವಾಣಿಜ್ಯೀಕರಿಸಲು ಸಹಾಯವನ್ನು ಒದಗಿಸಲಾಗುತ್ತದೆ.

(ಐಟಿಬಿಟಿ 4 ಎಲ್‌ಸಿಎಂ 2026)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.